# ಶ್ರೀಮಾತೆಯವರ ಪಾದಚಿಹ್ನೆಗಳು

ಎನ್. ಗೋಪೀನಾಥ

ಲೋಕೋತ್ತರ ವ್ಯಕ್ತಿಗಳಿಗೆ ಸಂಬಂಧಿಸಿದ ಪ್ರತಿಯೊಂದೂ ಪವಿತ್ರ. ಶ್ರೀಮಾತೆ ಶಾರದಾದೇವಿಯವರ ಪಾದಚಿಹ್ನೆಗಳು ಭಕ್ತರಲ್ಲಿ ಎಂತಹ ಭಾವವನ್ನು ಕೆರಳಿಸಬಲ್ಲವು ಎಂಬುದು ಈ ಕಿರು ಲೇಖನದ ವಸ್ತುವಾಗಿದೆ. ಶಿವಮೊಗ್ಗದ ವಾಸಿಗಳಾದ ಶ್ರೀ ಎನ್. ಗೋಪೀನಾಥರು ಶ್ರೀರಾಮಕೃಷ್ಣರ ಭಾವಧಾರೆಯಿಂದ ಪ್ರೇರಿತರಾದವರು.

ಶ್ರೀಮಾತೆ ಶಾರದಾದೇವಿಯವರ ಜೀವಿತಾವಧಿಯ ಕೊನೆಯ ದಶಕದಲ್ಲಿ ಭಕ್ತರು ಅವರ ಪಾದಚಿಹ್ನೆ(*foot-prints*)ಗಳನ್ನು ಬಟ್ಟೆಯ ಮೇಲೆ ತೆಗೆದುಕೊಂಡು, ಅವುಗಳನ್ನು ಜ್ಞಾಪಕಾರ್ಥವಾಗಿ ಹಾಗೂ ಪೂಜೆಗಾಗಿ ಇಟ್ಟುಕೊಳ್ಳುತ್ತಿದ್ದರು. ಅವರ ಪಾದಚಿಹ್ನೆಗಳ ಸುಂದರವಾದ ಭಾವ ಚಿತ್ರವೊಂದು '*Sarada Devi - A Biography in Pictures*' ಎಂಬ ಇಂಗ್ಲೀಷ್ ಪುಸ್ತಕದಲ್ಲಿ ಪ್ರಕಟವಾಗಿದೆ (ಅದ್ವೈತ ಆಶ್ರಮ, ಮಾಯಾವತಿ, ೧೯೮೮, ಪುಟ.೧೦೨)



ಆ ಛಾಯಾಚಿತ್ರದ ಕಟ್ಟು ಹಾಕಿಸಿದ ಫೋಟೋವೊಂದು ಈ ಭಕ್ತನ ಮನೆಯ ಕೋಣೆಯ ಗೋಡೆಯ ಮೇಲೆ ವಿರಾಜಿಸುತ್ತಿದೆ. ಸುಮಾರಾಗಿ ದೊಡ್ಡದಾದ ಆ ಫೋಟೋದ, ಎರಡೂ ಪಾದಚಿಹ್ನೆಗಳ ನಡುವೆ ಇರುವ ಖಾಲಿ ಜಾಗದಲ್ಲಿ, ಶ್ರೀಮಾತೆಯವರ ಸುಂದರ ಭಾವಚಿತ್ರವೊಂದನ್ನು ಅಂಟಿಸಿರುವುದರಿಂದ, ನೋಡಿದವರಿಗೆ ಅದು ಯಾರ ಪಾದಚಿಹ್ನೆಗಳೆಂದು ತತ್ಕ್ಷಣ ತಿಳಿಯುತ್ತದೆ. ಹತ್ತಿಯ ಎಳೆಯ ದೊಡ್ಡ ಹಾರದಿಂದ ಸದಾ ಅಲಂಕೃತವಾಗಿರುವ ಅದಕ್ಕೆ ಪ್ರತಿ ಗುರುವಾರ (ವಾರದಲ್ಲಿ ಶ್ರೀಮಾತೆಯವರ ಜನ್ಮದಿನ) ಹೂವಿನಹಾರದ ಅಲಂಕಾರ ಮಾಡಲಾಗುತ್ತದೆ.

ಶ್ರೀಮಾತೆಯವರ ಪಾದಚಿಹ್ನೆಗಳೆಂದರೆ ಸಾಮಾನ್ಯವಾದದ್ದೆ?! ಪವಿತ್ರತಾ ಸ್ವರೂಪಿಣಿಯಾದ ಆ ತಾಯಿಯ ಪಾದಚಿಹ್ನೆಗಳ ಮೇಲೆ ಧ್ಯಾನಮಾಡಿದಷ್ಟೂ, ಉತ್ಕೃಷ್ಟ ಭಾವನೆಗಳು ಮೂಡುತ್ತವೆ. ಈ ಮಾತಿಗೆ ಸ್ವಾಮಿ ಶಾರದೇಶಾನಂದರ ಅನುಭವವೇ ಸಾಕ್ಷಿ. ಅವರು ಜಯರಾಮವಟಿ (ಶ್ರೀಮಾತೆಯವರ ಜನ್ಮಸ್ಥಳ) ಯಲ್ಲಿ ಬ್ರಹ್ಮಚಾರಿ ಅವಧಿಯಲ್ಲಿ ಶ್ರೀಮಾತೆಯವರ ಸೇವೆ ಮಾಡುತ್ತಿರುವಾಗ ಒಮ್ಮೆ ಆದ ಅನುಭವದ ಸುಂದರ ಚಿತ್ರಣವನ್ನು ಕೊಡುತ್ತಾರೆ:

'......ಆಗತಾನೆ ಚಳಿಗಾಲ ಆರಂಭವಾಗಿತ್ತು. ಶ್ರೀಮಾತೆಯವರು ಆ ಬೆಳಗ್ಗೆ ಮುಂಚೆಯೆ ಮನೆಯಿಂದ ಹೊರಗೆ ಹೋಗಿದ್ದರು. ಆಗತಾನೆ ಬಿದ್ದ, ಮಣ್ಣಿನ ಕಣಗಳೊಂದಿಗೆ ಕೂಡಿದ ಹಿಮದ ಮೇಲೆ ನಡೆದು ಹಿಂದಿರುಗಿ ಬರುತ್ತಿದ್ದರು. ಮಣ್ಣಿನ ಕಣಗಳು ಅವರ ಪಾದಕ್ಕೆ ಮೆತ್ತಿಕೊಂಡಿದ್ದವು. ಈ ಸಮಯಕ್ಕೆ ಸ್ವಲ್ಪ ಮುಂಚೆ ಕೆಲಸಗಿತ್ತಿಯಾದ 'ಶಶಿ ಚಿಕ್ಕಮ್ಮ' ಬಾಗಿಲಿನ ಮುಂದಿನ ನೆಲವನ್ನು ಸಗಣಿಯಿಂದ ಸಾರಿಸಿದ್ದರು. ಬಾಗಿಲಿನ ಹತ್ತಿರ ಬಂದ ಶ್ರೀಮಾತೆಯವರು ಅಲ್ಲಿಯೆ ನಿಂತು, ಅದನ್ನು ಸರಿಸಿ ಒಳಗೆ ಹೋದರು. ಆಗ ಸಾರಿಸಿದ ನೆಲದ ಮೇಲೆ, ಮಣ್ಣು ಮೆತ್ತಿಕೊಂಡಿದ್ದ ಅವರ ಸುಂದರವಾದ ಪಾದಚಿಹ್ನೆಗಳು ಮೂಡಿ , ಸೌಭಾಗ್ಯ ದೇವತೆಯಾದ ಲಕ್ಷ್ಮಿಯೇ ಒಳಗೆ ಹೋದಂತೆ ನನ್ನ ಮನಸ್ಸಿಗೆ ತೋರಿತು.

'ನನ್ನ ಬಾಲ್ಯದ ದಿನಗಳಲ್ಲಿ– ಲಕ್ಷ್ಮೀಪೂಜೆಯ ಸಂದರ್ಭದಲ್ಲಿ ಬಾಗಿಲಿನ ಮೇಲೆ ಅಕ್ಕಿ ಹಿಟ್ಟಿನಿಂದ ಬರೆದ ಪಾದಚಿಹ್ನೆಗಳ ಚಿತ್ರಗಳನ್ನು

ನೋಡುತ್ತಿದ್ದೆ. ಆ ಚಿತ್ರಗಳು ದೇವಿಯು ಮನೆಯನ್ನು ಪ್ರವೇಶಿಸುವ ಸಂಕೇತಗಳಾಗಿದ್ದವು. ಈ ದಿನ ಶ್ರೀಮಾತೆಯವರು ಮೂಡಿಸಿದ ಚಿಹ್ನೆಗಳು ಅದೇ ರೀತಿಯಾಗಿದ್ದವು. ಆದರೆ (ಮನೆಯ ಬಾಗಿಲಿನ ಮೇಲೆ ಬರೆದ ) ಆ ಚಿಹ್ನೆಗಳಾದರೊ ಭಕ್ತರ ಭಾವನೆಯ ಕಾಲ್ಪನಿಕ ಚಿತ್ರಗಳಾಗಿದ್ದವು; ಆದರೆ ಇದು (ಈ ಶ್ರೀಮಾತೆಯ ಪಾದ ಚಿಹ್ನೆಗಳು) ಪ್ರತ್ಯಕ್ಷ ಪ್ರಮಾಣವಾದದ್ದು! ಮನಸ್ಸನ್ನೆ ಸೂರೆಗೊಳ್ಳುವಂತಿದ್ದ ಆ ಪಾದಚಿಹ್ನೆಗಳು ನನ್ನ ಕಣ್ಣುಗಳನ್ನು ಸೆರೆಹಿಡಿದು ಹೃದಯದಲ್ಲಿ ಅತೀವ ಆನಂದವನ್ನುಂಟುಮಾಡಿದವು. ಹಿಂದೆ (ಶ್ರೀಕೃಷ್ಣನ ಲೀಲಾಸ್ಥಾನವಾದ ) ಯಮುನಾ ದಂಡೆಯಲ್ಲಿ ಈ ತರಹದ (ಶ್ರೀಕೃಷ್ಣನ) ಪಾದಚಿಹ್ನೆಗಳನ್ನು ನೋಡಿಯೆ ಗೋಪಿಯರು ರೋಮಾಂಚನಗೊಂಡರು. ಓ, ಭೂದೇವಿಯೆ, ನೀನು ನಿಜಕ್ಕೂ ಧನ್ಯೆ! ಮರುಕ್ಷಣವೆ ನನ್ನ ಸಂತಸವೆಲ್ಲ (ಶ್ರೀ ಮಾತೆಯವರ) ಪಾದ ಚಿಹ್ನೆಗಳು, ಮಾನವ ದೃಷ್ಟಿಯಿಂದ ಶಾಶ್ವತವಾಗಿ ಮಾಯವಾಗುವುದೆಂಬ ಯೋಚನೆಯಿಂದ ದುಃಖಕರವಾಗಿ ಪರಿವರ್ತಿತವಾಯಿತು! ಆ ಪಾದಚಿಹ್ನೆಗಳನ್ನು ಉಳಿಸಿಕೊಳ್ಳಲು ಏನೂ ಮಾಡಲಾಗುವುದಿಲ್ಲವೆ? ಇಲ್ಲ, ನಾನು ಏನನ್ನೂ ಊಹಿಸದಾದೆ. ಆದ್ದರಿಂದ ಆ ಪಾದಚಿಹ್ನೆಗಳ ಧೂಳಿಯನ್ನು ನೆಲದಿಂದ ತೆಗೆದುಕೊಂಡು, ನನ್ನ ತಲೆ ಮತ್ತು ಎದೆಗೆ ಮುಟ್ಟಿಸಿಕೊಂಡು ಆನಂದ ಸಂತೃಪ್ತಿಗಳನ್ನು ಪಡೆದೆ. ಆಗ ಮಿಂಚಿನಂತೆ ನನ್ನ ಮನಸ್ಸಿನಲ್ಲಿ ಈ ರೀತಿ ಹೊಳೆಯಿತು: ಸದಾ ಲೀಲಾಮಯಿಯಾದ ತಾಯಿ (ಜಗನ್ಮಾತೆ)ಯು ತನ್ನ ಪಾದ ಕಮಲಗಳನ್ನು ತನ್ನ ತ್ಯಾಗಿ ಭಕ್ತರ ಹೃದಯದಲ್ಲಿ ಶಾಶ್ವತವಾಗಿ ಅಚ್ಚೊತ್ತುತ್ತಾಳೆ. 'ಲಕ್ಷಾಂತರ ಚಂದ್ರರು, ಅವಳ ಪಾದಗಳ ಬೆರಳಿನ ಉಗುರಿನಿಂದ, ನಗೆಯನ್ನು ಹೊರಸೂಸುತ್ತಾರೆ! 'ಎನ್ನುತ್ತದೆ ಒಂದು ಹಾಡು,'ಮತ್ತು ಆ ದೇವಿಯ ಕಾಡಿಗೆ ಬಣ್ಣದ ಸೊಬಗು ಭಕ್ತರ ಹೃದಯಗುಹೆಯನ್ನೇ ಬೆಳಗಿಸುತ್ತದೆ!, (*Swami Saradeshananda*, The Mother As I Saw her' II Edition, 1987, Sri Ramakrishna Math, Chennai, Pages 143-144).

ಈ ರೀತಿ ಶ್ರೀಮಾತೆಯವರ ಪಾದಚಿಹ್ನೆಗಳ ಮೇಲೆ ಭಾವಿಸಿದಷ್ಟೂ ಉಚ್ಚ ಭಾವನೆಗಳು ಮೂಡಬಲ್ಲವು. ❄

# ಶ್ರೀಮಾತೆಯ ಈ ಪರಿ

ಸ್ವಾಮಿ ಅಭೇದಾನಂದರು ತಾವು ರಚಿಸಿದ 'ಶ್ರೀ ಶಾರದಾದೇವಿ ಸ್ತೋತ್ರ'ದಲ್ಲಿ ಶ್ರೀ ಮಾತೆಯವರನ್ನು' ರಾಮಕೃಷ್ಣ ಗತಪ್ರಾಣ' ಎಂದು ಸ್ತುತಿಸಿದ್ದಾರೆ. ಈ ಮಾತಿಗೆ ಪೂರಕವಾಗಿ ಅವರ ಜೀವನದಲ್ಲಿ ಅಸಂಖ್ಯ ಘಟನೆಗಳು ದೊರೆಯುತ್ತವೆ. ಅವುಗಳಲ್ಲಿ ಒಂದು ಘಟನೆಯನ್ನು ನೋಡೋಣ .



ಯುರೋಪಿನ ಸಂಸ್ಥೆಯೊಂದರಿಂದ ಮಾಡಿಸಿದ, ಶ್ರೀಮಾತೆಯವರ ಛಾಯಚಿತ್ರದ ಪ್ರತಿಯೊಂದನ್ನು ಶ್ರೀಮಾತೆಯವರಿಗೆ ಕೊಡಲಾಯಿತು. ಅವರು ಅದನ್ನು ಎರಡೂ ಕೈಯಲ್ಲಿ ತೆಗೆದುಕೊಂಡು (ನಮಸ್ಕಾರ ಪೂರ್ವಕವಾಗಿಯೊ ಎಂಬಂತೆ) ತಲೆಗೊತ್ತಿಕೊಂಡು ಅದನ್ನೇ ಸ್ವಲ್ಪಕಾಲ ದಿಟ್ಟಿಸಿ ನೋಡಿದರು. ಬಳಿಯಲ್ಲಿದ್ದ ಬ್ರಹ್ಮಚಾರಿಗೆ ಪರಮಾಶ್ಚರ್ಯವಾಗಿ, ಉಕ್ಕಿಬಂದ ನಗುವನ್ನು ತಡೆದುಕೊಳ್ಳಲು ಸ್ವಲ್ಪ ಕಷ್ಟವೇ ಆಯಿತು. ಶ್ರೀ ಮಾತೆಯವರು ಚಿತ್ರವನ್ನು ತಿರುಗಿಕೊಟ್ಟಾಗ 'ಇದು ಯಾರ ಚಿತ್ರ, ತಾಯಿ?' ಎಂದು ಕೇಳಿದರು

'ಏಕೆ? ಇದು ನನ್ನದು,' ಎಂದು ಶ್ರೀಮಾತೆ ಚಿಕ್ಕ ಬಾಲಿಕೆಯಂತೆ ನುಡಿದರು.

ಈ ಮಾತಿಗೆ ಬ್ರಹ್ಮಚಾರಿ ನಗಲು, 'ಏಕೆ ನಗುತ್ತೀಯೆ? ಎಂದು ಶ್ರೀಮಾತೆಯವರು ಕೇಳಿದರು.'ಇದು ನಿಮ್ಮದೇ ಭಾವ ಚಿತ್ರ. ಅದಕ್ಕೇ ನಮಸ್ಕರಿಸಿದಿರಿ!' ಎಂದರು ಬ್ರಹ್ಮಚಾರಿ.

ಅವರೊಂದಿಗೆ ತಾವೂ ನಗುತ್ತಾ ಶ್ರೀಮಾತೆ ಹೇಳಿದರು: 'ಇದರಲ್ಲಿ (ಭಾವಚಿತ್ರದಲ್ಲಿಯೂ) ಕೂಡ ಶ್ರೀರಾಮಕೃಷ್ಣರಿದ್ದಾರೆ!'